

**ವಾಸುದೇವ್ ಮೂರ್ತಿ ಪಿ.**

# ಸಿಗರೇಟ್ ಪ್ಲೀಸ್...

ರಾತ್ರಿ ಸುಮಾರು ಒಂದು ಗಂಟೆ. ಕತ್ತಲಿಗಿಂತ ಕಾರ್ಗತ್ತಲು ಅನ್ನುವ ಶಬ್ದವೇ ಆ ವಾತಾವರಣಕ್ಕೆ ಸರಿಹೊಂದುವುದೇನೋ ಅನ್ನುವಷ್ಟು ಕತ್ತಲು. ಚಂದ್ರ, ತನ್ನ ತಿಂಗಳ ರಜಾ ದಿನ ಅಂತಾ ಬೆಚ್ಚನೆಯ ಗೂಡು ಸೇರಿ ಮಲಗಿದ್ದ. ಆಕಾಶದ ತುಂಬೆಲ್ಲ ಮುತ್ತಿದ್ದ ಮೋಡಗಳು ನಕ್ಷತ್ರಗಳ ಚೂರುಪಾರು ಬೆಳಕನ್ನೂ ತಿಂದು ಕುಳಿತಿದ್ದವು.

ರವಿ ಒಮ್ಮೆ ವಾಚ್ ನೋಡಿಕೊಂಡ. ಅವನಾಗಲೇ ಗೌರಿಬಿದನೂರು ಪಟ್ಟಣ ದಾಟಿದ್ದ. ಅಲ್ಲಿಂದ ತನ್ನ ಊರು ಹದಿನೆಂಟು ಕಿ.ಮೀ. ರಾತ್ರಿ ಯಾವುದೇ ವಾಹನ ಸಂಚಾರ ಇರಲ್ಲ. ಸುಮಾರು ಇಪ್ಪತ್ತು ನಿಮಿಷದ ಪ್ರಯಾಣ. ಹೋದರೆ ಮನೆಯಲ್ಲಿಯೇ ಊಟ ಮಾಡಿ ಮಲಗಬಹುದು. ಸುಮಾರು ನಾಲ್ಕು ವರ್ಷಗಳ ನಂತರ ಊರಿಗೆ ಬರುತ್ತಿರುವುದು... ಅದೂ ಸರ್ಪ್ರೈಸ್ ಆಗಿ!

ಆದೇನೋ ಕೊಂಚ ಅಳುಕು!...

ಆ ಮಾಳ್ಯಾ ಗ್ರಾಮದ ಜನ ಹೇಳುವುದು ನಿಜಾನಾ?...

ಅಲ್ಲಿ ನಿಜವಾಗಲೂ ದೆವ್ವಗಳಿದ್ದಾವಾ?

ಭಯ ಮತ್ತು ತರ್ಕಗಳ ಹೊಯ್ದಾಟ!...